ದಿನಾಂಕಃ **05.03.2025** ರಂದು ಆರ್ ಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್.ಹೆಚ್.ಎಂ. ಅರ್ಜಿದಾರರ ಪರ ವಕೀಲರಿಂದಃ

ಇದೇ ಪ್ರಕರಣದ ಅಸಲು ದಾವೆ 13/2022 ರಲ್ಲಿ ಯಾವ ಯಾವ ಸ್ವತ್ತುಗಳು ಪಾಲಾಗಬೇಕು ಎಂದು ಕೇಳಲಾಗಿತ್ತು ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಅಭಿವೃದ್ಧಿ ಮಾಡಿದ್ದೇನೆ ಮತ್ತು ಅಲ್ಲಿ ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ಸದರಿ ಸ್ವತ್ತಿನಲ್ಲಿ ಬಾವಿ ತೆಗೆಸಿ, ಅಲ್ಲಿ ಮಣ್ಣನ್ನು ಸಮತಟ್ಟು ಮಾಡಿಸಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಅದರ ಫೋಟೋಗಳನ್ನು ಹಾಜರುಪಡಿಸಿದ್ದೇನೆ. ಸದರಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನಾನು ಕಟ್ಟಿಸಿದ ಮನೆಯ ಬಾಡಿಗೆಯನ್ನು 4 ನೇ ವಾದಿಯು ಅಕ್ರಮವಾಗಿ ಪಡೆಯುತ್ತಿದ್ದಾರೆ ಎಂದು ಹೇಳಿದ್ದು, ಅದರ ಬಗ್ಗೆ ದಾಖಲೆ ಇರುವುದಿಲ್ಲ. ಆದರೆ ಬಾಡಿಗೆದಾರರಿದ್ದಾರೆ. ದಾವೆ ದಾಖಲಿಸುವ ಸಮಯದಲ್ಲಿ ಸ್ವತ್ತಿನಲ್ಲಿರುವ ಎಲ್ಲಾ ಅಭಿವೃದ್ಧಿಗಳ ಬಗ್ಗೆ ವಾದಿಯರು ನಮೂದಿಸಿದ್ದು, ಅವರುಗಳು ಸರಿಯಾಗಿ ಸ್ವತ್ತಿನ ವಿವರ ತಿಳಿಸಿರುವುದಿಲ್ಲ ಮತ್ತು ಸತ್ಯ ಮರೆಮಾಚಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಟ್ಯಾಂಕ್ ಮಾಡಿ, ಮೀನುಗಾರಿಕೆ

ಮಾಡುತ್ತಿದ್ದೇನೆ ಎಂದು ತಿಳಿಸಿದ್ದು, ಅದರ ಬಗ್ಗೆ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ದಾವಾ ಸ್ವತ್ತಿಗೆ ಹೋಗಲು ರಸ್ತೆಯನ್ನು ಮಾಡಲು ಖರ್ಚು ಮಾಡಿದ್ದೇನೆ ಎಂದು ಹೇಳುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ದಾವಾ ಸ್ವತ್ತುಗಳಲ್ಲಿ ಯಾವುದೇ ಅಭಿವೃದ್ಧಿ ಮಾಡಿರುವುದಿಲ್ಲ ಮತ್ತು ಅದರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಎಲ್ಲಾ ಅಭಿವೃದ್ಧಿಗಳನ್ನು ನನ್ನ ತಂದೆ ಮತ್ತು ತಾಯಿ ಹಾಗೂ ವಾದಿಯರು ಮತ್ತು ನಾವೆಲ್ಲರೂ ಸೇರಿ ಮಾಡಿದ್ದು, ದಾವಾ ಸ್ವತ್ತುಗಳು ಸಮ ಪಾಲಾಗಬೇಕು ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಕೇಳಿರುವಂತೆ ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಹಾಜರುಡಿಪಸಿದ್ದು, ಅದಕ್ಕೆ ಸಂಬಂಧಿಸಿದಂತೆ ನಿತ್ಯಾನಂದ ಕುಮಾರ್ ಎನ್ನುವವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 63 ಬಿ ನಿಯಮದಡಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಸದರಿ ಯವರು ವೃತ್ತಿ ನಿರತ ಫೋಟೋಗ್ರಾಫರ್ ಎಂದು ತೋರಿಸಲು ದಾಖಲೆಗಳು ಇದೆಯೇ ಎಂದರೆ, ನಮ್ಮ ವಕೀಲರ ಕಚೇರಿಯ ಪಕ್ಕದಲ್ಲಿ ಅವರ ಸ್ಟುಡಿಯೋವನ್ನು ಹಾಕಿಕೊಂಡಿದ್ದಾರೆ. ಅವರು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಯಾವುದೇ ಮೌಲ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಫೋಟೋ ತೆಗೆದ ಬಗ್ಗೆ ಸದರಿ ಫೋಟೊಗ್ರಾಫರ್ ರಶೀದಿಯನ್ನು ಅದನ್ನು ಹಾಜರುಪಡಿಸಿಲ್ಲ. ನಾನು

ಹಾಜರುಪಡಿಸಿದ ಫೋಟೋಗಳಲ್ಲಿ ಕಾಣುತ್ತಿರುವುದು ನಾನು ಸ್ವಂತ ಖರ್ಚು ಮಾಡಿ ಕಟ್ಟಿಸಿದ ಕಟ್ಟಡಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.